ಸರ್ಕಾರದೊಡನೆ ನಡೆದ ಚರ್ಚೆಯಲ್ಲಿ ಕೆಲವು ಪರಿಷ್ಕೃತ ಅಂಶಗಳನ್ನು ಸೂಚಿಸಲಾಗಿದೆ. ಈ ಆಧಾರದ ಮೇಲೆ ಯೋಜನೆಯ ಟೆಕ್ನೋ ಏಕನಾಮಿಕ್ ಫೀಸಬಿಲಿಟಿ ವರದಿಯನ್ನು ಮತ್ತೊಮ್ಮೆ ಪುರ್ನಲೋಕಿಸಲಾಗಿದೆ ಮತ್ತು ಈ ಯೋಜನೆಯು ಕಾರ್ಯರೂಪಕ್ಕೆಬರಲು ಸಹಾಯಕವಾಗುವಂತಹ ಅವಶ್ಯಕವಾದ ಮೂಲ ಪ್ಯಾರಾ ಮೀಟರ್ಸ್‌ಗಳನ್ನು ಸೂಚಿಸುವಂತೆ ಕೇಳಿಕೊಳ್ಳಲಾಗಿದೆ. ಈ ಮೇಲಿನ ಎಲ್ಲಾ ಅಂಶಗಳಿಂದ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ದೊರೆಯಲು ವಿಳಂಬವಾಗುತ್ತಿದೆ.

ಹೇಮಾವತಿ ನೀರಿನಿಂದ ಜಲಾವೃತಗೊಂಡಿರುವ ಗ್ರಾಮಗಳು

689 (643) ಶ್ರೀ ಬಿ. ನಂಜಾಮರಿ(ತಿಪಟೂರು) : ಮಾನ್ಯ ಬೃಹತ್‌ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ತಿಪಟೂರು ತಾಲ್ಲೂಕಿಗೆ ಹೇಮಾವತಿ ನಾಲೆ ನೀರು ಬಿಟ್ಟಿರುವುದರಿಂದ ಗಂಗನ ಘಟ್ಟ ಸಾಸಲಹಳ್ಳಿ ಹರಿಜನ ಕಾಲೋನಿ, ಬಜಗೂರು, ಬಳ್ಳಕ್ಕೆರೆ ಮತ್ತು ಮತಿಘಟ್ಟ ಗ್ರಾಮಗಳು ಜಲಾವೃತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ)ಹಾಗಿದ್ದಲ್ಲಿ ಈ ಗ್ರಾಮಗಳು ಜಲವೃತ ಗೊಂಡಿರುವುದರಿಂದ ಆಗಿರುವ ನಷ್ಟದ ಪ್ರಮಾಣವೆಷ್ಟು; ಹಾಗೂ ಈವರೆವಿಗೂ ಕೈಗೊಂಡ ಕ್ರಮಗಳೇನು;

ಶ್ರೀ ಕೆ.ಎನ್ ನಾಗೇಗೌಡ (ಬೃಹತ್‌ನೀರಾವರಿ ಸಚಿವರು) :

ಅ) ಹೌದು

ಆ) ಉಂಟಾಗಿರುವ ನಷ್ಟದ ಪ್ರಮಾಣ ಹಾಗೂ ಪರಿಹಾರತ್ಮಕ ಕ್ರಮಗಳನ್ನು ತೆಗೆದುಕೊಳ್ಳವುದರ ಬಗ್ಗೆ ಪರಿಶೀಲಿಸಲಾಗುವುದು.

ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ನಬಾರ್ಡ್ ನೆರವು

691 (784) ಶ್ರೀ ಬಿ. ನಂಜಾಮರಿ(ತಿಪಟೂರು) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಈ ವರ್ಷ ಮೀಸಲಿಟ್ಟ ಹಣವೆಷ್ಟು?

ಆ) ಈ ಮಂಡಳಿಯ ವ್ಯಾಪ್ತಿಗೆ ಒಳಪಡುವ ತಾಲ್ಲೂಕುಗಳೆಷ್ಟು ? ಒಂದೊಂದು ತಾಲ್ಲೂಕಿಗೆ ಮೀಸಲಿಡಲಾಗಿದ್ದ ಹಣವೆಷ್ಟು?

ಇ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ನಬಾರ್ಡ್ ನೆರವು ಪಡೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ತಿಪಟೂರು ಕ್ಷೇತ್ರಕ್ಕೆ ಎಷ್ಟು ಹಣ ಮೀಸಲಾಗಿಡಲಾಗಿತ್ತು, ಇಷ್ಟು ಹಣ ಬಿಡುಗಡೆ ಮಾಡಲಾಗಿದೆ. ಹಾಗೂ ಇದುವರೆಗೂ ಖರ್ಚುಮಾಡಲಾದ ಹಣ ಎಷ್ಟು?

ಶ್ರೀಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :

ಅ)ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 1998-99ನೇ ಸಾಲಿನಲ್ಲಿ 850-00 ಲಕ್ಷ ರೂ.ಗಳನ್ನು ಮೀಸಲಾಗಿಡಲಾಗಿದೆ.

ಆ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ರಾಜ್ಯದ 57 ತಾಲ್ಲೂಕಿನ 75 ವಿಧಾನ ಸಭಾ ಕ್ಷೇತ್ರಗಳು ಒಳಪಟ್ಟಿದ್ದು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 1998-99ನೇ ಸಾಲಿನಲ್ಲಿ 9.60 ಲಕ್ಷ ರೂ.ಗಳನ್ನು ಮೀಸಲಾಗಿಡಲಾಗಿದೆ.

ಇ) ಈ ವಿಷಯದಲ್ಲಿ ಮಂಡಳಿಯು ಸಲ್ಲಿಸಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) 1998-99ನೇ ಸಾಲಿನಲ್ಲಿ ತಿಪಟೂರು ವಿಧಾನ ಸಭಾ ಕ್ಷೇತ್ರಕ್ಕೆ 9.60ಲಕ್ಷ ರೂ.ಗಳನ್ನು ಮೀಸಲಾಗಿಡಲಾಗಿದ್ದು ಈ ಪೈಕಿ 8 ಕಾಮಗಾರಿಗಳಿಗೆ 6.00 ಲಕ್ಷ ರೂ.ಗಳಿಗೆ ಆಡಳಿತ ಮಂಜೂರಾತಿಯನ್ನು ನೀಡಿ 4.25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಅನುಷ್ಠಾನಾಧಿಕಾರಿಗಳಿಂದ ಕಾಮಗಾರಿ ಗಳ ಪ್ರಗತಿಯ ವರದಿ ಬಂದ ನಂತರ ಉಳಿದ ಹಣವನ್ನು ಬಿಡುಗಡೆ ಮಾಡಲಾಗುವುದು.

ಬಚಾವತ್ ತೀರ್ಪು ಕುರಿತು.

694 (108) ಶ್ರೀ ಬಸವಗೌಡ ರಾಮನಗೌಡ ಪಾಟೀಲ್(ಯತ್ನಾಳ್)(ವಿಜಾಪುರ) : ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬಚಾವತ್ ತೀರ್ಪಿನ ಪ್ರಕಾರ 2000ನೇ ಇಸವಿಯೊಳಗೆ ಉಪಯೋಗಿಸಬೇಕಾದ ನೀರಿನ ಪ್ರಮಾಣವೆಷ್ಟು? (ಯಾವ ಯಾವ ಯೋಜನೆಗಳಡಿಯಲ್ಲಿ ವಿವರ ನೀಡುವುದು)

2) ಇದರಲ್ಲಿ 31-3-98 ಹಾಗೂ 31-1-99 ರವರೆಗೆ ಉಪಯೋಗ ಮಾಡಿಕೊಂಡ ನೀರಿನ ಪ್ರಮಾಣವೆಷ್ಟು?

3) ಇನ್ನೂ ಉಪಯೋಗಿಸಿಕೊಳ್ಳಬೇಕಾದ ನೀರಿನ ಪ್ರಮಾಣವೆಷ್ಟು?

4) ಈ ಯೋಜನೆಗಳನ್ನು ಪೂರ್ಣ ಗೊಳಿಸಲು ಬೇಕಾಗಿರುವ ಮೊಬಲಗೆಷ್ಟು; 1998-99ನೇ ಸಾಲಿಗೆ ಖರ್ಚುಮಾಡಲು ನಿಗಧಿಪಡಿಸಿದ್ದ ಹಣವೆಷ್ಟು, 31-1-99ರವೆರೆಗೆಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

1) ಕೃಷ್ಣಾ ಕೊಳ್ಳದಲ್ಲಿ 2000ನೇ ಇಸವಿಯೊಳಗೆ ಬಚಾವತ್‌ತೀರ್ಪಿನ ಪ್ರಕಾ ಉಪಯೋಗಿಸ ಬೇಕಾದ ನೀರಿನ ಪ್ರಮಾಣ ಈ ಕೆಳಕಂಡಂತಿದೆ.

1. ಭಾರಿ ಹಾಗೂ ಬೃಹತ್ ನೀರಾವರಿಯೋಜನೆಗಳಡಿಯಲ್ಲಿ	609.17 ಟಿಎಂಸಿ
2. ಸಣ್ಣ ನೀರಾವರಿ ಯೋಜನೆಗಳಡಿಯಲ್ಲಿ	119.83 ಟಿಎಂಸಿ
ಒಟ್ಟು :	729.00 ಟಿಎಂಸಿ

2. ಭಾರಿ ಮತ್ತು ಮಧ್ಯಮ ನೀರಾವರಿಗೆ ಸಂಬಂಧಿಸಿದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

3. ಭಾರಿ ಮತ್ತು ಮಧ್ಯಮ ನೀರಾವರಿಗೆ ಸಂಬಂಧಿಸಿದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

4. ಭಾರಿ ಮತ್ತು ಮಧ್ಯಮ ನೀರಾವರಿಗೆ ಸಂಬಂಧಿಸಿದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.